# ಕಾಣದಂತೆ ಮಾಯವಾಗಲಾರೆ!

**ಬಬ್ಲಿ ಪಾತ್ರಗಳಿಗೇ ಹೆಸರಾಗಿದ್ದ ಸಿಂಧು ಲೋಕನಾಥ್ ಈಗ ತಮ್ಮ ವೃತ್ತಿಬದುಕಿನ ಹೊರಳು ದಾರಿಯಲ್ಲಿದ್ದಾರೆ. ಸೌಂದರ್ಯದರ್ಶನದ ಜೊತೆಗೆ ತನ್ನೊಳಗಿನ ಕಲಾವಿದೆಯನ್ನೂ ಬೆಳೆಸಬೇಕು ಎಂದು ಅವರಿಗೆ ಅನಿಸಿದೆ.**

**■ ಪದ್ಮನಾಭ ಭಟ್**



‘ನಾನು ಸಿನಿಮಾ ನಟನೆಯನ್ನು ನಿಲ್ಲಿಸುತ್ತೇನೆ ಎಂದು ಯಾವತ್ತೂ ಹೇಳಿಲ್ಲ; ಹೇಳುವುದೂ ಇಲ್ಲ. ಚಿತ್ರರಂಗದಿಂದ ಎಂದಿಗೂ ಕಾಣದಂತೆ ಮಾಯವಾಗಲಾರೆ. ಮದುವೆಯಾದ ಮೇಲೆ ನನಗೆ ಅವಕಾಶಗಳೇನೂ ಕಮ್ಮಿಯಾಗಿಲ್ಲ. ನಾನೇ ಹೆಚ್ಚು ಚ್ಯೂಸಿಯಾಗಿದ್ದೇನೆ ಅಷ್ಟೆ’ ತಮ್ಮನ್ನು ತಾವೇ ನಂಬಿಸಿಕೊಳ್ಳುವವರಂತೆ ಇಷ್ಟನ್ನು ಹೇಳಿ ವಿಶ್ವಾಸದಿಂದ ನಕ್ಕರು ಸಿಂಧು ಲೋಕನಾಥ್.

ಅವರು ನಾಯಕಿಯಾಗಿ ನಟಿಸಿರುವ ‘ಕಾಣದಂತೆ ಮಾಯವಾದನೋ’ ಸಿನಿಮಾ ನವೆಂಬರ್ ಎರಡನೇ ವಾರದಲ್ಲಿ ಬಿಡುಗಡೆಗೊಳ್ಳಲಿದೆ. ಸಿಂಧು ದಾಂಪತ್ಯ ಜೀವನಕ್ಕೆ ಕಾಲಿಟ್ಟಮೇಲೆ ಬಿಡುಗಡೆಯಾಗುತ್ತಿರುವ ಅವರ ಎರಡನೇ ಸಿನಿಮಾ ಇದು. ನಟನೆ ಕೊಂಚ ವಿರಳವಾಯಿತಲ್ಲವೇ ಎಂದು ಕೇಳಿದ್ದಕ್ಕೆ ಮೇಲಿನ ಉತ್ತರದೊಂದಿಗೆ ಸಮಜಾಯಿಷಿ ನೀಡಿದರು.

‘ಹೀಗೊಂದು ದಿನ’ ಸಿನಿಮಾದಲ್ಲಿಯೇ ತಮ್ಮ ಬಬ್ಲಿ ಇಮೇಜ್‌ನಿಂದ ಹೊರಗೆ ಬಂದಿದ್ದ ಸಿಂಧು, ‘ಕಾಣದಂತೆ ಮಾಯವಾದನೋ’ ಚಿತ್ರದಲ್ಲಿ ಇನ್ನಷ್ಟು ಪ್ರಬುದ್ಧ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರಂತೆ. ಪಾತ್ರದಲ್ಲಿಯಷ್ಟೇ ಅಲ್ಲ, ನಿಜಜೀವನದಲ್ಲಿಯೂ ಅವರು ಹೆಚ್ಚು ಪ್ರಬುದ್ಧೆಯಾಗಿರುವುದು ಮಾತಿನಲ್ಲಿಯೇ ವ್ಯಕ್ತವಾಗುತ್ತಿತ್ತು.

‘ಕನ್ನಡದಲ್ಲಿ ಫ್ಯಾಂಟಸಿ ಸಿನಿಮಾಗಳು ತುಂಬ ಕಡಿಮೆ. ‘ಕಾಣದಂತೆ ಮಾಯವಾದನೋ’ ಸಿನಿಮಾ ದೆವ್ವ ಮತ್ತು ಒಬ್ಬ ಜೀವಂತ ಮನುಷ್ಯನ ನಡುವೆ ನಡೆಯುವ ಪ್ರೇಮಕಥೆ. ಹಾಗಂತ ಹಾರರ್ ಸಿನಿಮಾ ಅಲ್ಲ; ಇದು ಪಕ್ಕಾ ಲವ್ ಸ್ಟೋರಿ’ ಎಂದು ವಿವರಿಸುವ ಅವರು, ‘ನಾನೂ ಈ ಚಿತ್ರದಲ್ಲಿ ಎನ್‌ಜಿಓದಲ್ಲಿ ಕೆಲಸ ಮಾಡುವ ವಂದನಾ ಎಂಬ ಹೆಸರಿನ ಹುಡುಗಿಯಾಗಿ ನಟಿಸಿದ್ದೇನೆ. ಇದು ನಾಯಕ–ನಾಯಕಿ ಪ್ರಧಾನ ಸಿನಿಮಾ ಅಲ್ಲ. ಕಥೆಯೇ ಇಲ್ಲಿ ಪ್ರಧಾನ. ಉಳಿದ ಎಲ್ಲ ಪಾತ್ರಗಳೂ ಇಲ್ಲಿ ಮುಖ್ಯ ಪಾತ್ರಗಳೇ’ ಎನ್ನುವುದು ಅವರ ವಿವರಣೆ.

ಸಾಕಷ್ಟು ಚ್ಯೂಸಿಯಾಗಿದ್ದೇನೆ ಎಂದೇ ಹೇಳಿಕೊಳ್ಳುವ ಸಿಂಧು, ಒಂದು ಸಿನಿಮಾವನ್ನು ಒಪ್ಪಿಕೊಳ್ಳುವಾಗ ಮೊದಲು ಗಮನಿಸುವುದು ಕಥೆ ಮತ್ತು ತನ್ನ ಪಾತ್ರವನ್ನು. ‘ಒಮ್ಮೆ ಮಾಡಿದ ಬಗೆಯ ಪಾತ್ರಗಳನ್ನೇ ಮತ್ತೆ ಮತ್ತೆ ಮಾಡುತ್ತಿರುವುದು ನನಗಿಷ್ಟವಿಲ್ಲ. ಒಂದು ಪಾತ್ರ ನನ್ನೊಳಗಿನ ಕಲಾವಿದೆಯನ್ನು ಹೊರತರಬೇಕು. ನನ್ನನ್ನು ಬೆಳೆಸಬೇಕು. ನಟನೆಗೆ ಸವಾಲು ಅನಿಸಬೇಕು. ಅಂಥ ಪಾತ್ರಗಳನ್ನಷ್ಟೇ ಒಪ್ಪಿಕೊಳ್ಳುತ್ತೇನೆ’ ಎಂದು ಸ್ಪಷ್ಟವಾಗಿ ಹೇಳುವ ಅವರು ಸದ್ಯಕ್ಕೆ ಅಜಯ್ ರಾವ್ ಜೊತೆ ‘ಕೃಷ್ಣಾ ಟಾಕೀಜ್’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ನಟನೆಯ ಸಹವಾಸದ ಜೊತೆಜೊತೆಗೆ ನೃತ್ಯದ ಮೋಹವೂ ಸಿಂಧು ಅವರಿಗೆ ಮೊದಲಿನಿಂದಲೂ ಇದೆ. ಒಂದು ನೃತ್ಯಶಾಲೆಯನ್ನು ತೆರೆಯಬೇಕು ಎಂಬ ಬಹುದಿನದ ಕನಸು ಈಗ ಐದು ತಿಂಗಳ ಹಿಂದೆ ನನಸಾಗಿದೆ. ಬೆಂಗಳೂರಿನಲ್ಲಿ ಅವರು ಒಂದು ನೃತ್ಯಶಾಲೆಯನ್ನು ತೆರೆದು ಯೋಗ, ಜುಂಬಾ, ಬ್ಯಾಲೆ, ಏರೋಬಿಕ್ಸ್ ಹೀಗೆ ಹಲವು ಪ್ರಕಾರಗಳ ನೃತ್ಯವನ್ನು ಕಲಿಸುತ್ತಿದ್ದಾರೆ. ಅಲ್ಲದೆ ಅವರೇ ಒಂದು ಬ್ಯೂಟಿ ಪ್ರಾಡಕ್ಟ್ ಕಂಪನಿಯನ್ನೂ ನಡೆಸುತ್ತಿದ್ದಾರೆ. ನೈಸರ್ಗಿಕ ವಸ್ತುಗಳನ್ನು ಬಳಸಿ ಸೌಂದರ್ಯವರ್ಧಕ ಸಾಮಗ್ರಿಗಳನ್ನು ತಯಾರಿಸುವುದು ಈ ಕಂಪನಿಯ ಅಗ್ಗಳಿಕೆ.

ಹೀಗೆ ತಮ್ಮ ಹವ್ಯಾಸ ಮತ್ತು ಬಣ್ಣದ ಬದುಕಿನ ಒಡನಾಟ ಎರಡನ್ನೂ ಒಟ್ಟೊಟ್ಟಿಗೇ ತೂಗಿಸಿಕೊಂಡು ಹೋಗುತ್ತಿರುವ ಸಿಂಧು ಇಂದೂ ಮುಂದೂ ಎಂದೆಂದೂ ಸಿನಿಮಾ ಸಹವಾಸದಲ್ಲಿಯೇ ಇರುತ್ತೇನೆ ಎಂದು ವಿಶ್ವಾಸದಿಂದ ನುಡಿಯುತ್ತಾರೆ. ■